# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 863 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್<br>(ವಿಧಾನ ಸಭೆಯಿಂದ ಚುನಯಿತರಾದವರು) |
| ಉತ್ತರಿಸುವ ದಿನಾಂಕ | : | 13.03.2025 |
| ಉತ್ತರಿಸುವ ಸಚಿವರು. | : | ಗೃಹ ಸಚಿವರು. |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ವಿಜಯಪುರ ಜಿಲ್ಲೆಯಲ್ಲಿ ಇತ್ತೀಚೆಗೆ ಕಳ್ಳತನ ಪ್ರಕರಣಗಳು ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಪ್ರಕರಣದಲ್ಲಿ ಭಾಗಿಯಾಗಿರುವವರೆಲ್ಲ ಹೊರ ರಾಜ್ಯದವರು ಇರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)</td><td>ವಿಜಯಪುರ ಜಿಲ್ಲೆಯಲ್ಲಿ ಕಳ್ಳತನ ಪ್ರಕರಣಗಳು ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಕಳೆದ ಮೂರು ವರ್ಷಗಳಲ್ಲಿ ವಿಜಯಪುರ ಜಿಲ್ಲೆಯಲ್ಲಿ ವರದಿಯಾಗಿರುವ ಕಳ್ಳತನ ಪ್ರಕರಣಗಳು ಮತ್ತು ಭಾಗಿಯಾಗಿರುವ ಸ್ಥಳೀಯ ಹಾಗೂ ಹೊರ ರಾಜ್ಯದ ಆರೋಪಿಗಳ ವಿವರಗಳು ಈ ಕೆಳಕಂಡಂತಿದೆ:-
<table>
<tr><th>ವರ್ಷ</th><th>ದಾಖಲಾದ ಕಳ್ಳತನ ಪ್ರಕರಣಗಳ ಸಂಖ್ಯೆ</th><th>ದಸ್ತಗಿರಿಯಾದ ಸ್ಥಳಿಯ ಆರೋಪಿತರ ಸಂಖ್ಯೆ</th><th>ದಸ್ತಗಿರಿಯಾದ ಹೊರ ರಾಜ್ಯದ ಆರೋಪಿತರ ಸಂಖ್ಯೆ</th></tr>
<tr><td>2023</td><td>485</td><td>307</td><td>58</td></tr>
<tr><td>2024</td><td>449</td><td>263</td><td>35</td></tr>
<tr><td>2025 (ಫೆಬ್ರವರಿ)</td><td>70</td><td>16</td><td>09</td></tr>
</table></td></tr>
<tr><td>ಆ)</td><td>ವಿಜಯಪುರ ಜಿಲ್ಲೆಯ ಸುತ್ತಲು ಅಂತರರಾಜ್ಯ ಗಡಿ ರೇಖೆಯನ್ನು ಹೊಂದಿದ್ದು, ನೆರೆ ರಾಜ್ಯದ ಅಪರಾಧ ಹಿನ್ನಲೆ ಹೊಂದಿರುವ ವ್ಯಕ್ತಿಗಳು ರಾಜ್ಯವನ್ನು ಪ್ರವೇಶಿಸದಂತೆ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)</td><td>ವಿಜಯಪುರ ಜಿಲ್ಲೆಯ ಸುತ್ತಲು ಅಂತರರಾಜ್ಯ ಗಡಿ ರೇಖೆಗಳನ್ನು ಹೊಂದಿದ್ದು, ನೆರೆ ರಾಜ್ಯದ ಅಪರಾಧ ಹಿನ್ನೆಲೆ ಹೊಂದಿರುವ ವ್ಯಕ್ತಿಗಳು ರಾಜ್ಯವನ್ನು ಪ್ರವೇಶಿಸದಂತೆ ತಡೆಯಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ :-<br>➢ ನೆರೆ ರಾಜ್ಯದಿಂದ ವಿಜಯಪುರ ಜಿಲ್ಲೆಗೆ ಬರುವ ಎಲ್ಲಾ ರಾಷ್ಟ್ರೀಯ-ರಾಜ್ಯ ಹಾಗೂ ಇತರೇ ಪ್ರಮುಖ ರಸ್ತೆಗಳಲ್ಲಿ ನಾಕಾಬಂದಿ ವ್ಯವಸ್ಥೆಯನ್ನು 24/7 ಮಾದರಿಯಲ್ಲಿ ನಿರ್ವಹಿಸಲಾಗುತ್ತಿದೆ.<br>➢ ರಾತ್ರಿ ಗಸ್ತು ವ್ಯವಸ್ಥೆಯನ್ನು ಹೆಚ್ಚಿನ ಸಿಬ್ಬಂದಿ ನೇಮಿಸಿ ಕಟ್ಟುನಿಟ್ಟಾಗಿ ನಿರ್ವಹಿಸಲಾಗುತ್ತಿದೆ.<br>➢ ಅಪರಾಧ ಹಿನ್ನೆಲೆಯುಳ್ಳ ಎಮ್.ಓ.ಬಿ ಗಳನ್ನು ಸರ್‌ಪ್ರೈಜ್ ವಿಸಿಟ್ ಮಾಡಿ ಅವರ ಚಲನವಲನಗಳ ಮೇಲೆ ನಿಗಾವಹಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ರಾತ್ರಿ ಗಸ್ತು ಸಮಯದಲ್ಲಿ ಹೊಸದಾಗಿ ಇ-ಸ್ಮಾರ್ಟ್ ಬೀಟ್ ವ್ಯವಸ್ಥೆ ಜಾರಿ ಮಾಡಿ ಗಸ್ತು ವ್ಯವಸ್ಥೆಯನ್ನು ಬಿಗಿಗೊಳಿಸಲಾಗಿರುತ್ತದೆ.<br>➢ ಎಮ್.ಸಿ.ಸಿ.ಟಿ.ಎನ್ ಅಪ್ಲಿಕೇಷನ್ ಮುಖಾಂತರ ಸಂಶಯಾಸ್ಪದ ವ್ಯಕ್ತಿಗಳು ರಾತ್ರಿ ಸಮಯದಲ್ಲಿ ಓಡಾಡುವುದು ಕಂಡುಬಂದಲ್ಲಿ ಅಂತಹವರ ಫಿಂಗರ್ ಪ್ರಿಂಟ್‌ಗಳನ್ನು ಸದರಿ ಅಪ್ಲಿಕೇಷನ್ ಮುಖಾಂತರ ಚೆಕ್ ಮಾಡಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ವಿಜಯಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಠಾಣಾ ಸರಹದ್ದಿನಲ್ಲಿ ಇರುವ ಸರ್ಕಾರಿ,</td></tr>
</table>

ಸಾರ್ವಜನಿಕ ಸಿ.ಸಿ ಟಿ.ವಿ ಕ್ಯಾಮರಾಗಳ ಮಾಹಿತಿಯನ್ನು ಸಂಗ್ರಹಿಸಿಡುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

- ಸಂಗ್ರಹಿಸಿರುವ ಸಿ.ಸಿ ಟಿ.ವಿ ಕ್ಯಾಮರಾಗಳ ಮಾಹಿತಿಯನ್ನು ಕಾಲ ಕಾಲಕ್ಕೆ ಚೆಕ್ ಮಾಡುತ್ತಿದ್ದು ದುರಸ್ತಿ ಇದ್ದಲ್ಲಿ ಅವುಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ಸಂಬಂಧಪಟ್ಟ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿರುತ್ತದೆ.
- ಅಲ್ಲದೇ ಬಡಾವಣೆ ಪ್ರದೇಶಗಳಲ್ಲಿರುವ ಮನೆಯ ಮಾಲೀಕರಿಗೂ ತಮ್ಮ ಮನೆಗಳಿಗೆ ಸಿ.ಸಿ ಕ್ಯಾಮರಾ ಅಳವಡಿಸುವಂತೆ ಸೂಚನೆಗಳನ್ನು ನೀಡಲಾಗಿರುತ್ತದೆ.

ಇ) ಇತ್ತೀಚೆಗೆ ಜಿಲ್ಲೆಯಲ್ಲಿ ಕೊಲೆ, ಕಳ್ಳತನ, ದರೋಡೆ ಪ್ರಕರಣಗಳು ಹೆಚ್ಚಾಗುತ್ತಿದ್ದು, ಅದರಲ್ಲಿ ಹೊರ ರಾಜ್ಯದ ಆರೋಪಿಗಳು ಇರುವುದು ನಿಜವೇ; ಇದ್ದರೆ ಅಂತರವನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳಾವುವು;

ವಿಜಯಪುರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ವರದಿಯಾಗಿರುವ ಕೊಲೆ, ಕಳ್ಳತನ, ದರೋಡೆ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ:-

| ವರ್ಷ | ಕೊಲೆ ಪ್ರಕರಣಗಳ ಸಂಖ್ಯೆ | ದಾಖಲಾದ ಕಳ್ಳತನ ಪ್ರಕರಣಗಳ ಸಂಖ್ಯೆ | ದರೋಡೆ ಪ್ರಕರಣಗಳ ಸಂಖ್ಯೆ |
|---|---|---|---|
| 2023 | 58 | 485 | 3 |
| 2024 | 61 | 449 | 4 |
| 2025 (ಫೆಬ್ರವರಿ) | 14 | 70 | 0 |

ಕೊಲೆ, ದರೋಡೆ ಮತ್ತು ಕಳ್ಳತನ ಪ್ರಕರಣಗಳು ವರದಿಯಾದ ಕೂಡಲೇ ದೂರುಗಳನ್ನು ಸ್ವೀಕರಿಸಿ, ಪ್ರಕರಣಗಳನ್ನು ದಾಖಲಿಸಿಕೊಂಡು, ತನಿಖೆ ಕೈಗೊಂಡು, ಆರೋಪಿಗಳನ್ನು ಪತ್ತೆ ಮಾಡಿ, ಬಂಧಿಸುವ ಮೂಲಕ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ತನಿಖೆ ಪೂರ್ಣಗೊಂಡ ನಂತರ ಆರೋಪಿಗಳ ವಿರುದ್ಧ ದೋಷಾರೋಪಣಾ ಪತ್ರ ಸಿದ್ಧಪಡಿಸಿ ಸಂಬಂಧಿಸಿದ ನ್ಯಾಯಾಲಯಗಳಿಗೆ ಸಲ್ಲಿಸಲಾಗುತ್ತದೆ.

ಮೇಲಿನ ಪ್ರಕರಣಗಳಲ್ಲಿ ಬಂಧಿಸಲಾಗಿರುವ ಸ್ಥಳೀಯ ಮತ್ತು ಹೊರ ರಾಜ್ಯದ ಆರೋಪಿಗಳ ವಿವರಗಳು ಈ ಕೆಳಕಂಡಂತಿದೆ:-

| ವರ್ಷ | ಕೊಲೆ | | ಕಳ್ಳತನ | | ದರೋಡೆ | |
|---|---|---|---|---|---|---|
| | ದಸ್ತಗಿರಿಯಾದ ಸ್ಥಳಿಯ ಆರೋಪಿತರ ಸಂಖ್ಯೆ | ದಸ್ತಗಿರಿಯಾದ ಹೊರ ರಾಜ್ಯದ ಆರೋಪಿತರ ಸಂಖ್ಯೆ | ದಸ್ತಗಿರಿಯಾದ ಸ್ಥಳಿಯ ಆರೋಪಿತರ ಸಂಖ್ಯೆ | ದಸ್ತಗಿರಿಯಾದ ಹೊರ ರಾಜ್ಯದ ಆರೋಪಿತರ ಸಂಖ್ಯೆ | ದಸ್ತಗಿರಿಯಾದ ಸ್ಥಳಿಯ ಆರೋಪಿತರ ಸಂಖ್ಯೆ | ದಸ್ತಗಿರಿಯಾದ ಹೊರ ರಾಜ್ಯದ ಆರೋಪಿತರ ಸಂಖ್ಯೆ |
| 2023 | 155 | 9 | 307 | 58 | 10 | 2 |
| 2024 | 189 | 6 | 263 | 35 | 12 | 0 |
| 2025 (ಫೆಬ್ರವರಿ) | 31 | 0 | 16 | 09 | 0 | 0 |

ಕೊಲೆ, ದರೋಡೆ ಮತ್ತು ಕಳ್ಳತನ ಪ್ರಕರಣಗಳನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು 'ಆ' ಪ್ರಶ್ನೆಗೆ ವಿವರಿಸಿದಂತೆ ಸರ್ಕಾರವು ಕ್ರಮ ಕೈಗೊಂಡಿರುತ್ತದೆ.

<table>
<tr>
<td>ಈ)</td>
<td>ಜಿಲ್ಲೆಯಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿರುವುದಕ್ಕೆ ಸಿಬ್ಬಂದಿ ಕೊರತೆ ಮತ್ತು ವಾಹನಗಳ ಕೊರತೆ ಮುಖ್ಯ ಇರುವುದು ನಿಜವೇ; ಅದನ್ನು ಸರಿದೂಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)</td>
<td>ಹಾಲಿ ಇರುವ ಸಿಬ್ಬಂದಿ ಬಲದಿಂದಲೇ ತ್ವರಿತವಾಗಿ ಪತ್ತೆ ಮಾಡಿ ತನಿಖೆ ನಡೆಸಿ ಅಂತಿಮ ವರದಿಯನ್ನು ಸಲ್ಲಿಸಲಾಗುತ್ತಿದೆ. ವಿಜಯಪುರ ಜಿಲ್ಲೆಯ ಅಧಿಕಾರಿ/ಸಿಬ್ಬಂದಿಗಳ ಮಂಜೂರಾತಿ ಬಲ ಹಾಗೂ ರಿಕ್ತ ಸ್ಥಾನಗಳ ಮಾಹಿತಿಯು ಈ ಕೆಳಕಂಡಂತಿರುತ್ತದೆ:–
<table>
<tr><th>ಮಂಜೂರಾತಿ ಬಲ</th><th>ಹಾಲಿ ಬಲ</th><th>ರಿಕ್ತಸ್ಥಾನ</th></tr>
<tr><td>1838</td><td>1767</td><td>71</td></tr>
</table>
<u>ವಿಜಯಪುರ ಜಿಲ್ಲೆಯಲ್ಲಿನ ವಾಹನಗಳ ವಿವರ:</u>
<table>
<tr><th>ವಾಹನದ ಮಾದರಿ</th><th>ಚಾಲನಾ ಸ್ಥಿತಿಯಲ್ಲಿರುವ ವಾಹನಗಳ ಸಂಖ್ಯೆ</th><th>ಕೊರತೆ ಇರುವ ವಾಹನಗಳು</th></tr>
<tr><td>ದ್ವಿಚಕ್ರ ವಾಹನಗಳ ಸಂಖ್ಯೆ</td><td>77</td><td>25</td></tr>
<tr><td>ನಾಲ್ಕು ಚಕ್ರದ ವಾಹನಗಳ ಸಂಖ್ಯೆ</td><td>85</td><td>31</td></tr>
<tr><td>ಒಟ್ಟು</td><td>162</td><td>56</td></tr>
</table>
ಸಿಬ್ಬಂದಿ ವರ್ಗದ ರಿಕ್ತಸ್ಥಾನಗಳನ್ನು ಭರ್ತಿ ಮಾಡಲು ಹಾಗೂ ಅವಶ್ಯವಿರುವ ವಾಹನಗಳನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ.</td>
</tr>
</table>

ಸಂಖ್ಯೆ: ಹೆಚ್‌ಡಿ 20 ಪಿಸಿಕ್ಯೂ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು